# ಸರ್ವಶಕ್ತನ ರಕ್ಷಣೆಯ ನೆರಳಿನಲ್ಲಿ



✍ ಸುನಯನ ವಾಲ್ಟರ್ಸ್

ಜರ್ಮನಿಯ ಶಕ್ತಿಶಾಲಿ ಮತ್ತು ಆಕ್ರಮಣಕಾರಿಯಾದ ಸೈನ್ಯದೊಂದಿಗೆ ತಾಸುಗಳವರೆಗೆ ಹೋರಾಡಿದ ಆ ಸಂಯುಕ್ತ ಪಡೆಯು ತಾವು ಆವರಿಸಿ ಆಕ್ರಮಿಸಿಕೊಂಡಿದ್ದ ಹಳ್ಳಿಯನ್ನು ಬಿಟ್ಟು ಹಿಂಜರಿಯಬೇಕಾಯಿತು. ತಮ್ಮ ಸಣ್ಣ ಸೈನ್ಯ ತುಕಡಿ ಪಲಾಯನ ಮಾಡುತ್ತಿದ್ದಾಗ ಗಡಿಬಿಡಿಯಲ್ಲಿ ಅವರ ನಾಯಕನೊಬ್ಬನು ತನ್ನ ಮೂರು ಸಂಗಾತಿಗಳೊಂದಿಗೆ ದಿಕ್ಕು ತಪ್ಪಿದನು. ಉಳಿದ ಸೈನ್ಯವೆಲ್ಲಾ ಪರಾರಿಯಾಗಿ, ಉಳಿದಿದ್ದ ಈ ನಾಲ್ಕು ಜನರು ಆವರಿಸಿ ಬರುತ್ತಿದ್ದ ಜರ್ಮನ್ ಸೈನ್ಯದಿಂದ ಮರೆಯಾಗಲು ಹಿಂದೆ ಮುಂದೆ ಯೋಚಿಸದೆ ಎದುರಿಗೆ ಕಾಣುತ್ತಿದ್ದ ತೆರೆದ ಬಾಗಿಲಿನೊಳಗೆ ನೇರವಾಗಿ ಧಾವಿಸಿದರು.

ಮನೆಯು ನಿರ್ಜನವಾಗಿತ್ತು. ಎದುರಿಗಿದ್ದ ಮೇಲಂತಸ್ತಿಗೆ ಏರುವ ಮೆಟ್ಟಿಲುಗಳನ್ನು ಅವರು ಹತ್ತಿ ಹೋದರು. ಅಲ್ಲಿಂದ ಜರ್ಮನ್ ಸೈನಿಕರ ಚಲನವಲನಗಳನ್ನು ಪರೀಕ್ಷಿಸಿ ಸಮಯ ನೋಡಿ ಓಡಿಹೋಗುವ ಉದ್ದೇಶ ಅವರದಾಗಿತ್ತು. ಆದರೆ ಮೇಲೆ ಹತ್ತಿ ನೋಡಿದ ಅವರಿಗೆ ನಿರಾಶೆಯಾಯಿತು. ಅಲ್ಲಿ ಅವಿತುಕೊಳ್ಳಲು ಯಾವುದೇ ಸ್ಥಳವಿರಲಿಲ್ಲ. ಅಲ್ಲಿ ಒಂದು ದೊಡ್ಡ ತೆರೆದ ಆವರಣವಿದ್ದು ಸೂರ್ಯನ ಪ್ರಕಾಶವು ನೇರವಾಗಿ ಬಿದ್ದು ಪೂರ್ಣ ಬೆಳಕು ಆವರಿಸಿತ್ತು.

“ನಾವು ಇಲ್ಲಿ ಕೆಲಹೊತ್ತು ಬಗ್ಗಿ ಕುಳಿತುಕೊಳ್ಳೋಣ” ನಾಯಕನೆಂದನು. ಹಾಗೆಯೇ ಅಲ್ಲಿ ಕುಳಿತಿದ್ದ ಅವರು ಹೊರಗೆ ನಡೆಯುತ್ತಿದ್ದ ಕದನದ ಭೀಕರ ಶಬ್ದಗಳನ್ನು ಆಲಿಸುತ್ತಿದ್ದರು. ತಾಸುಗಳ ಮೇಲೆ ತಾಸು ದಾಟಿಹೋಯಿತು. ಯಾವುದೇ ಗಳಿಗೆಯಲ್ಲಿ ತಮ್ಮ ಪತ್ತೆಗಾಗಿ ತಾವು ಬಂಧಿಸಲ್ಪಡಬಹುದು ಅಥವಾ ಗುಂಡಿನಿಂದ ಹತರಾಗಬಹುದು ಎಂಬ ಭಯ ಅವರನ್ನು ಸಂಪೂರ್ಣವಾಗಿ ಆವರಿಸಿತ್ತು.

ಆಗ ಆ ನಾಯಕನೆಂದನು– “ಸಂಗಾತಿಗಳೇ ನಾವು ಕೆಲಹೊತ್ತು ದೇವರ ಧ್ಯಾನ ಮಾಡೋಣ. ಇದು ನಮ್ಮ ಕೊನೆಯ ಪ್ರಾರ್ಥನೆಯಾಗಿರಲೂಬಹುದು”. ಕೇಳಿದವರಿಗೆ ಅಚ್ಚರಿ ಉಂಟಾದರೂ ತಮ್ಮ ಬಂದೂಕುಗಳನ್ನು ಕೆಳಗಿಟ್ಟ ಅವರು ಏಕಾಗ್ರತೆಯಿಂದ ದೇವರ ಧ್ಯಾನಕ್ಕೆ ಸಿದ್ಧರಾದರು.

“ಮೊದಲು ಒಂದು ಹಾಡು ಹಾಡೋಣ. 23 ನೇ ಕೀರ್ತನೆಯನ್ನು ಧ್ಯಾನಿಸಿರಿ. ಆದರೆ ತಗ್ಗಿದ ಧ್ವನಿಯಲ್ಲಿ.......... ಬಹಳ ಸಣ್ಣ ದ್ವನಿಯಲ್ಲಿ” ಆತನೆಂದನು. ಪಿಸುದ್ವನಿಯಲ್ಲೆಂಬಂತೆ ಅವರು ಒಟ್ಟಾಗಿ ಹಾಡಿದರು–

“ಹೌದು, ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ

ನಾನು ಯಾವ ಕೇಡಿಗೂ ಹೆದರೆನು.

ಏಕೆಂದರೆ ನೀನು ನನ್ನೊಂದಿಗಿದ್ದೀ.

ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ".

ಹೊಸ ಒಡಂಬಡಿಕೆಯ ಒಂದು ಚಿಕ್ಕ ಪ್ರತಿಯನ್ನು ತನ್ನ ಜೇಬಿನಿಂದ ಹೊರತೆಗೆದ ಆತನು ಓದಲಾರಂಭಿಸಿದನು.

*"ಶರೀರವನ್ನು ಕೊಲ್ಲುವವರಿಗೆ ಹೆದರಬೇಡಿ; ಯಾಕೆಂದರೆ ಅವರು ಆತ್ಮವನ್ನು ಕೊಲ್ಲಲು ಶಕ್ತರಲ್ಲ. ಆದರೆ ಆತ್ಮ ಮತ್ತು ಶರೀರ ಎರಡನ್ನೂ ನರಕದಲ್ಲಿ ನಾಶ ಮಾಡಲು ಶಕ್ತನಾಗಿರುವಾತನಿಗೆ ಭಯಪಡಿರಿ. ಒಂದು ಕಾಸಿಗೆ ಎರಡು ಗುಬ್ಬಿಗಳು ಮಾರಲ್ಪಡುತ್ತವಲ್ಲಾ; ಆದರೆ ನಿಮ್ಮ ತಂದೆಯ ಚಿತ್ತವಿಲ್ಲದೆ ಅವುಗಳಲ್ಲಿ ಒಂದಾದರೂ ನೆಲಕ್ಕೆ ಬೀಳುವುದಿಲ್ಲ. ಆದರೆ ನಿಮ್ಮ ತಲೆಯ ಕೂದಲುಗಳೆಲ್ಲಾ ಲೆಕ್ಕಿಸಲ್ಪಟ್ಟಿವೆ. ನೀವು ಬಹಳ ಗುಬ್ಬಿಗಳಿಗಿಂತ ಬಹು ಬೆಲೆಯುಳ್ಳವರಾಗಿದ್ದೀರಿ. ಆದ್ದರಿಂದ ಭಯಪಡಬೇಡಿರಿ"* ಮತ್ತಾಯ 10:28–31).

ಆತನು ಇನ್ನೂ ಓದುತ್ತಿರುವಾಗಲೇ ಕೆಳಗೆ ದೊಡ್ಡ ಗಲಭೆ ಕೇಳಿಸಿತು. ದೊಡ್ಡ ಬೊಬ್ಬೆ........... ಬಾಗಿಲು ಗುದ್ದಿ ಕಿಟಕಿಯ ಗಾಜುಗಳನ್ನು ಪುಡಿಗುಟ್ಟಿದ ಶಬ್ದ. ಮುಂದುವರೆಸಿದ ಆತನೆಂದನು– "ನಾನು ಈ ಕೆಲಸದಲ್ಲಿ ಸಿದ್ಧಹಸ್ತನಲ್ಲ. ಆದರೆ ನಾವು ಪ್ರಾರಂಭಿಸಿದ್ದನ್ನು ಮುಗಿಸೋಣ ಈಗ ಪ್ರಾರ್ಥನೆ ಮಾಡೋಣ".

ಭೀತನಾಗಿದ್ದರೂ ಸರಳವಾದ ಮಾತುಗಳಿಂದ ಆತನು ದೇವರನ್ನು ಬೇಡಿಕೊಂಡನು. "ದೇವರೇ ನಮ್ಮ ಮೇಲೆ ಕರುಣೆ ತೋರಿಸು. ನಾವು ಸಾಯಲೇ–ಬೇಕಾಗಿದ್ದರೆ, ಶಾಂತಿಯಿಂದ ಮರಣಹೊಂದುವಂತಾಗಲಿ". ಆತನು ಇನ್ನೂ ಪ್ರಾರ್ಥಿಸುತ್ತಿದ್ದಾಗ ಭಾರವಾದ ಕೈಯೊಂದು ಬಾಗಿಲನ್ನು ದೂಡಿ ತೆರೆದ ಸಪ್ಪಳ ಕೇಳಿಸಿತು. ನಾಲ್ಕು ಮಂದಿಯಲ್ಲಿ ಒಬ್ಬನೂ ವಿಚಲಿತನಾಗಲಿಲ್ಲ. ಒಂದು ಕ್ಷಣ ಮೌನವಾಗಿದ್ದ ಆತನು ಶಾಂತವಾದ ಧ್ವನಿಯಿಂದ ಮುಂದುವರೆಸಿದನು.

"ಪರಲೋಕದಲ್ಲಿರುವ ನಮ್ಮ ತಂದೆಯೇ........" ಯಾರೊಬ್ಬರೂ ತಿರುಗಿ ನೋಡದಿದ್ದರೂ ಜರ್ಮನ್ ಸೈನಿಕನೊಬ್ಬನು ಆ ಜಾಗದಲ್ಲಿ ತಮ್ಮೊಂದಿಗಿದ್ದಾನೆಂದು ಎಲ್ಲರಿಗೂ ಅನುಭವವಾಯಿತು. ಅವನ ಬೂಟುಗಾಲಿನ ಸಪ್ಪಳವು ನಿಂತುದರಿಂದ ತಮ್ಮ ಹಿಂದೆ ಅವನೂ ಏಕಾಗ್ರತೆಯಿಂದ ನಿಂತಿದ್ದಾನೆಂದು ಅವರು ತಿಳಿದುಕೊಂಡರು. ಕೆಲವು ಕ್ಷಣಗಳು ಹೀಗೆಯೇ ಕಳೆದುವು.

"ಯಾಕೆಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿನ್ನವೇ........... ಆಮೆನ್".

ಯಾರೊಬ್ಬರೂ ಬಾಗಿಸಿದ ತಲೆಯನ್ನು ಎತ್ತಲಿಲ್ಲ. ಆಗ ಬಾಗಿಲನ್ನು ಮೆಲ್ಲನೇ ಎಳೆದು ಮುಚ್ಚಿದ ಶಬ್ದ ಹಿಂದೆಯೇ ಒಳಗೆ ಬಂದಿದ್ದ ವ್ಯಕ್ತಿ ಮೆಲ್ಲನೇ ಮೆಟ್ಟಿಲುಗಳನ್ನು ಇಳಿದು ಹೋದ ಸಪ್ಪಳ ಕೇಳಿಸಿತು. ಮನೆಯೊಳಗಿನ ಗಲಭೆ ನಿಂತುಹೋಯಿತು. ಯುದ್ಧದ ಗಲಭೆ ಗದ್ದಲಗಳು ಬರಬರುತ್ತಾ ದೂರ ದೂರ ಸರಿದು ಹೋದಂತಾಯಿತು. ತಾಸುಗಳವರೆಗೂ ಅಲ್ಲಿಯೇ ಉಳಿದ ಅವರು ಸಂಜೆಗತ್ತಲಾಗುತ್ತಲೇ ಆ ಜಾಗ ಬಿಟ್ಟು ಮುಂದುವರೆದರು. ಹೊಲಗಳನ್ನು ದಾಟುತ್ತಾ ವೈರಿ ಪ್ರದೇಶವನ್ನು ದಾಟಿ ಸಂಯುಕ್ತ ಪಡೆಯ ಸುರಕ್ಷಿತ ಸ್ಥಳವನ್ನು ಸೇರಿದರು.

"ಅವನು ನನ್ನನ್ನು ಕರೆಯುವನು; ನಾನು ಅವನಿಗೆ ಉತ್ತರ ಕೊಡುವೆನು; ಇಕ್ಕಟ್ಟಿನಲ್ಲಿ ನಾನು ಅವನ ಸಂಗಡ ಇದ್ದು ಅವನನ್ನು ತಪ್ಪಿಸಿ ಘನಪಡಿಸುವೆನು. ದೀರ್ಘಾಯುಷ್ಯದಿಂದ ಅವನನ್ನು ತೃಪ್ತಿ ಪಡಿಸಿ ನನ್ನ ರಕ್ಷಣೆಯನ್ನು ಅವನಿಗೆ ತೋರಿಸುವೆನು" (ಕೀರ್ತನೆ 91:15–16). ■